

ಯಾವಾಗಲೂ ಬರುತ್ತಾರಾ?' ಬಹುಶಃ ಇಲ್ಲ. ಹಿಂದೆ ಬಂದಿದ್ದು ನೋಡಿದ ನೆನಪು ಇಲ್ಲ.

'ವಂದನೆಗಳು' ಎಂದು ಹೇಳಿ ನನ್ನತ್ತ ಮತ್ತೊಮ್ಮೆ ನೋಡಿ ಬಿರುಗಾಳಿಯಂತೆ ನಡೆದಳು.

ಆ ಕ್ಷಣ ನನಗೆ ದಿಗ್ಭ್ರಮೆಯಾಯಿತು. ಏಕೆ ಏನಾಯಿತು? ಅವಳಿಗೆ ನನ್ನ ಬಗ್ಗೆ ಇದ್ದ ಕೂತೂಹಲಕ್ಕೆ ನನಗೂ ಅವಳ ಬಗ್ಗೆ ಕೂತೂಹಲ ಉಂಟಾಯಿತು. ನಾನು ಊಟ ಮುಗಿಸಿದ ಮೇಲೆ ಪರಿಚಾರಿಕೆಯನ್ನು ಕೇಳಿದೆ, 'ಅಲ್ಲಿ ಕುಳಿತಿದ್ದ ಹುಡುಗಿ ನಿಮಗೇನಾದರೂ ಗೊತ್ತೆ?' ಇಲ್ಲ ಸಾರ್ ನಾನು ಅವಳನ್ನು ಮಾತಾಡಿಸಿಲ್ಲ. ಪ್ರತಿ ಶನಿವಾರಗಳಂದು ಊಟಕ್ಕಾಗಿ ಬರುವುದನ್ನು ಗಮನಿಸಿದ್ದೇನೆ.

'ಬೇರೆ ದಿನಗಳಲ್ಲಿ ಬರುವುದಿಲ್ಲವೇ?'

'ಬೇರೆ ದಿನಗಳಲ್ಲಿ ಅವಳನ್ನು ನೋಡಿಲ್ಲ.'

'ಅವಳ ಬಗ್ಗೆ ನಿಮಗೇನಾದರೂ ಗೊತ್ತಿದೆಯಾ?'

'ಅವಳು ಪ್ರಾಯಶಃ ಸನಿಹದ ಅಂಗಡಿಯಲ್ಲಿ ಕೆಲಸಕ್ಕಿರಬಹುದು.'

'ನಿಮಗೆ ಹೇಗೆ ಗೊತ್ತು.'

'ಶನಿವಾರ ಸಂಬಳದ ದಿನ. ಆವಾಗ ಅವಳು ಬರುತ್ತಾಳೆ. ಬೇರೆ ದಿನಗಳಲ್ಲಿ ಅವಳು ಊಟಕ್ಕೆಂದು ಖರ್ಚು ಮಾಡಲಿಕ್ಕೆ ಆಗಲಿಕ್ಕಿಲ್ಲ. ಬಹುಶಃ ಅವಳು ಹೆಚ್ಚಿಗೆ ಗಳಿಸುತ್ತಿರಲಿಕ್ಕಿಲ್ಲ.'

ಅವಳ ಉತ್ತರದಿಂದ ನನ್ನ ಕೂತೂಹಲ ಕೆರಳಿತು. ಆ ಹುಡುಗಿಯ ಬಗ್ಗೆ ಇದ್ದ ಕೂತೂಹಲವೇ ಛಲವಾಯಿತು. ಅವಳು ನನ್ನ ಬಗ್ಗೆ ಏಕೆ ಕೇಳಿದಳು? ಅವಳಿಗೆ ನನ್ನ ಕುರಿತಾಗಿ ಇದ್ದ ಕೂತೂಹಲ ರಹಸ್ಯವಾಗಿತ್ತೆ?

ಅವಳ ಬಡತನದ ವಿಷಾದಮಯ ಚಿತ್ರ ನನ್ನನ್ನು ಯೋಚನೆಗೀಡು ಮಾಡಿತ್ತು. ಆ ಮಗು ಯಾರದು? ನನ್ನಿಂದ ಏನಾದರೂ ಅವಳಿಗೆ ಸಹಾಯ ಮಾಡುವುದು ಸಾಧ್ಯವಿತ್ತೆ? ರವಿವಾರ ಲಂಡನ್ನಿನ ಎಲ್ಲಾ ಅಂಗಡಿಗಳು ಮುಚ್ಚಿರುತ್ತವೆ. ಸೋಮವಾರದ ಬೆಳಗಿನ ಉಪಹಾರದ ನಂತರ ಅವಳನ್ನು ಕಾಣಲು ತಯಾರಾದೆ. ಸೇಂಟ್